ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಬುಧವಾರ, ದಿನಾಂಕ : 04 ನೇ ಮಾರ್ಚ್, 2020

ಕಂದಾಯ ಇಲಾಖೆಯ ಭೂ ಪರಿವರ್ತನೆಯ ಆದೇಶಗಳ ಬಗ್ಗೆ

ಶ್ರೀ ಕಾಂತರಾಜ್ (ಬಿಎಂಎಲ್):- (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

196 (297) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ಭೂ ಕಂದಾಯ ಕಾಯೆ, 1964 ಕಲ 95(2) ರಡಿಯಲ್ಲಿ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ

ಪರಿವರ್ತಿಸುವ ಆದೇಶಗಳ ಮೇಲೆ ಕಡ್ಡಾಯವಾಗಿ ಡಿಜಿಟಲ್ ಸಹಿ (ಆigiಣಚಿಟ sigಟಿಚಿಣuಡಿe) ಮಾಡಿ, ಭೂಪರಿವರ್ತನಾ ಕೋರಿಕೆಗಳನ್ನು ಭೂಪರಿವರ್ತನಾ ತಾಂತ್ರಾಂಶದ ಮುಖಾಂತರ ದಿನಾಂಕ: 01-03-2018 ರಿಂದ ನಿರ್ವಹಿಸತಕ್ಕದ್ದು ಎಂದು ಸುತ್ತೋಲೆ ಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ದಿನಾಂಕ: 01-03-2018 ರಿಂದ 01-03-2019 ರವರೆಗೆ ಸರ್ಕಾರದ ಸುತ್ತೋಲೆಯಂತೆ ಭೂಪರಿವರ್ತನೆಗಾಗಿ ಎಷ್ಟು ಅರ್ಜಿಗಳನ್ನು ರಾಜ್ಯದ ಆಯಾ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸ್ವೀಕರಿಸಲಾಗಿದೆ; ಮತ್ತು ಎಷ್ಟು ಪ್ರಕರಣಗಳಲ್ಲಿ ಜಿಲ್ಲಾಧಿಕಾರಿಗಳು ಡಿಜಿಟಲ್ ಸಹಿ ಮಾಡಿ ಆದೇಶಗಳನ್ನು ಹೊರಡಿಸಿರುತ್ತಾರೆ; (ಜಿಲ್ಲಾವಾರು ಅಂಕಿ ಅಂಶಗಳನು ನೀಡುವುದು)

(ಇ) ಈ ರೀತಿ ಭೂ ಪರಿವರ್ತನೆ ತಂತ್ರಾಂಶ ಮುಖಾಂತರ ಭೂ ಪರಿವರ್ತನೆ ಅರ್ಜಿಗಳನ್ನು ಸಲ್ಲಿಸಲು ಅರ್ಜಿದಾರರು ಜಿಲ್ಲಾಧಿಕಾರಿಗಳ ಕಛೇರಿಯನ್ನು ಸಂಪರ್ಕಿಸಿದಾಗ ಭೂ ಕಂದಾಯ ಅಧಿನಿಯಮ ಹಾಗೂ ಭೂ ಕಂದಾಯ ಕಾನೂನು ಅಡಿಯಲ್ಲಿ ಅವಕಾಶ ಕಲ್ಪಿಸಿಲ್ಲದಿದ್ದರೂ ಸಹ ಭೂ ಪರಿವರ್ತನಾ ಅರ್ಜಿಯೊಂದಿಗೆ ಭೂಪರಿವರ್ತ ನೆ ಆಗಬೇಕಾದ ಜಮೀನಿಗೆ ಭೂದಾಖಲೆಗಳ ಇಲಾಖೆಯಿಂದ 11 ಇ ನಕ್ಷೆ ಮತ್ತು ತಾಲ್ಲೂಕು ಸರ್ವೇಯರ್‌ರವರಿಂದ ಮ್ಯಾನುಯಲ್ ನಕ್ಷೆಗಳನ್ನು ಹಾಜರುಪಡಿಸಬೇಕು ಎಂದು ತಿಳಿಸಿ, ಸ್ವೀಕೃತಿಯನ್ನು ನೀಡದೆ ಇರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಸಾರ್ವಜನಿಕ ಹಿತದೃಷ್ಟಿಯಿಂದ, ರೈತರಿಗೆ ಅನುಕೂಲವಾಗುವಂತೆ 11 ಇ ನಕ್ಷೆ ಮತ್ತು ತಾಲ್ಲೂಕು ಸರ್ವೆಯರ್ ನಕ್ಷೆಗಳನ್ನು ಹಾಜರುಪಡಿಸದಿದ್ದರೂ ಸಹ ಭೂ ಪರಿವರ್ತನೆ ಅರ್ಜಿಗಳನ್ನು ಸ್ವೀಕರಿಸಲು ಜಿಲ್ಲಾಧಿಕಾರಿಗಳಿಗೆ ಸರ್ಕಾರ ಕೂಡಲೇ ಸುತ್ತೋಲೆ ಹೊರಡಿಸಲು ಕ್ರಮ ತೆಗೆದುಕೊಳ್ಳುವುದೇ ? (ಸ್ಪಷ್ಟ ಉತ್ತರ ನೀಡುವುದು)